# ಮಾರ್ತಾಂಡ ದೇಗುಲ, ಅವಶೇಷಗಳೆ ಆಭರಣ



**ರೂಪದಲ್ಲಿಯೂ, ಇತಿಹಾಸದಲ್ಲಿಯೂ ಅವಶೇಷವಾಗಿ ಮಾತ್ರ ಉಳಿದಿರುವ ಜಮ್ಮು ಕಾಶ್ಮೀರದ ಮಾರ್ತಾಂಡ ದೇಗುಲ, ತನ್ನ ಗಾಂಭೀರ್ಯ, ವಿಶಿಷ್ಟ ಶೈಲಿಯಿಂದ ಗಮನಸೆಳೆಯುತ್ತಿರುವ ಸ್ಥಳ.**

■ ಎಸ್. ಪ್ರಭಾವತಿ

ಜಮ್ಮು ಮತ್ತು ಕಾಶ್ಮೀರದ ಇತಿಹಾಸದ ಅವಶೇಷದಂತೆ ಕಾಣುವ ಪ್ರಾಚೀನ 'ಮಾರ್ತಾಂಡ ದೇವಾಲಯ' ಐತಿಹಾಸಿಕವಾಗಿ ಮಾತ್ರವಲ್ಲದೆ ವಾಸ್ತುಶಿಲ್ಪದ ಕಾರಣಕ್ಕೂ ಗಮನಸೆಳೆಯುವ ತಾಣ.

ಜಮ್ಮುವಿನ ಅನಂತನಾಗ್ ಜಿಲ್ಲೆಯಲ್ಲಿರುವ ಮಾರ್ತಾಂಡ ದೇವಾಲಯ, ಸೂರ್ಯನಿಗೆ ಸಮರ್ಪಿತವಾಗಿರುವ ವಿಶೇಷ ದೇಗುಲ. ಕ್ರಿ.ಶ. 8ನೇ ಶತಮಾನದಲ್ಲಿ ಕಾಶ್ಮೀರದ ರಾಜ ಮೂರನೇ ಲಲಿತಾದಿತ್ಯ ಮುಕ್ತಪಿದನ ಅವಧಿಯಲ್ಲಿ ಕಾರ್ಕೋಟ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಈ ದೇಗುಲ ಸ್ಥಾಪಿತವಾಯಿತು. ದೇವಾಲಯವನ್ನು ಕ್ರಿ.ಶ. 725 ರಿಂದ 756ರವರೆಗೆ ನಿರ್ಮಿಸಲಾಗಿರುವುದಾಗಿ ತಿಳಿಸುತ್ತದೆ ಇತಿಹಾಸ.

ದೇವಾಲಯದ ಪ್ರಮುಖ ಆಕರ್ಷಣೆ, ಅದರ ವಿಸ್ತಾರ ಅಂಗಳ. ಇದು 220 ಅಡಿ ಉದ್ದ ಮತ್ತು 142 ಅಡಿ ಅಗಲವಿದೆ. ಇದು ಸ್ತಂಭಾಕಾರದ ದೇವಾಲಯ. ಮಧ್ಯದಲ್ಲಿ ಒಂದು ಸ್ಮಾರಕ ಮತ್ತು ಅಂಗಳವಿದೆ. ಅಲ್ಲದೆ 84 ಸ್ತಂಭದಂತಹ ರಚನೆಗಳನ್ನು ಒಳಗೊಂಡಿದೆ. ಪ್ರಧಾನ ದೇವಾಲಯವು ಚತುರ್ಭುಜಾಕೃತಿಯ ಅಂಗಳದ ಮಧ್ಯದಲ್ಲಿದ್ದು, ಉತ್ತರ ಮತ್ತು ದಕ್ಷಿಣಕ್ಕೆ ಎರಡು ಸಣ್ಣ ರಚನೆಗಳಿಂದ ಸುತ್ತುವರೆದಿದೆ. ದೇವಾಲಯದ ಗೋಡೆಗಳನ್ನು ಸುಣ್ಣದ ಗಾರೆ ಬಳಸಿ ಅಲಂಕರಿಸಿದ ಬೂದು ಬಣ್ಣದ ಕಲ್ಲಿನ ಬೃಹತ್ ರಚನೆಗಳಿಂದ ನಿರ್ಮಿಸಲಾಗಿದೆ.

ಕೆಲವು ಗೋಡೆಗಳು ದೇವತೆಗಳ ಸ್ಪಷ್ಟ ಕೆತ್ತನೆಗಳನ್ನು ಹೊಂದಿವೆ. 32000 ಚದರ ಅಡಿ ವಿಸ್ತೀರ್ಣವಿರುವ ಸಂಕೀರ್ಣದ ಪಶ್ಚಿಮ ಭಾಗದಲ್ಲಿ ಪ್ರವೇಶವಿದೆ. ಭವ್ಯ ಪ್ರವೇಶದ್ವಾರವನ್ನು ಹಿಂದೂ ದೇವತೆಗಳ ಸಂಕೀರ್ಣ ಕೆತ್ತನೆಗಳಿಂದ ಅಲಂಕರಿಸಲಾಗಿದೆ. ನಾಲ್ಕು ಕೈಗಳನ್ನು ಹೊಂದಿರುವ ಬ್ರಹ್ಮನ ಶಿಲ್ಪ ಅದ್ಭುತವಾಗಿದೆ. ಸೂರ್ಯ ಹಾಗೂ ವಿಷ್ಣುವಿಗೆ ಸಮರ್ಪಿತವಾದ ಈ ದೇವಾಲಯದಲ್ಲಿ ಮೂರು ವಿಭಿನ್ನ ಕೋಣೆಗಳಿವೆ. ಮಂಟಪ, ಗರ್ಭಗೃಹ ಮತ್ತು ಅಂತರಾಲಯವಿದ್ದು, ಕಾಶ್ಮೀರದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ದೇವಾಲಯಕ್ಕಿಂತ ಹೆಚ್ಚು ಭವ್ಯ ಆಯಾಮಗಳನ್ನು ಹೊಂದಿದೆ. ಮುಖ್ಯ ದೇವಾಲಯವು ಪಿರಮಿಡ್ ಆಕಾರದ ತುದಿಯನ್ನು ಹೊಂದಿದ್ದು ಇಲ್ಲಿ ಸಂಸ್ಕೃತ ಶಾಸನಗಳು, ಸವೆದ ಶಿಲ್ಪಗಳು ಮತ್ತು ಸಾಂಪ್ರದಾಯಿಕ ನೃತ್ಯಭಂಗಿಗಳ ದೇವತೆಗಳ ಚಿತ್ರಗಳ ಕೆತ್ತನೆಗಳನ್ನು ಕಾಣಬಹುದು.

ಭಾರತದ ಅತ್ಯದ್ಭುತ ಹಾಗೂ ಗಟ್ಟಿತನದ ನಿರ್ಮಾಣ ಕಾಮಗಾರಿಗಳಿಗೆ, ಅಮೋಘ ರಚನೆಗೆ ಸಾಕ್ಷಿಯಾಗಿ ನಿಂತಿರುವ ಈ ದೇಗುಲ – ಗಾಂಧಾರ, ಗುಪ್ತ, ಗ್ರೀಕ್, ರೋಮನ್, ಸಿರಿಯನ್ ಬೈಜಾಂಟೈನ್ ಮತ್ತು ಚೀನೀ ವಾಸ್ತುಶಿಲ್ಪಶೈಲಿಗಳ ಅದ್ಭುತ ಮಿಶ್ರಣದಿಂದ ಸಂಯೋಜನೆಗೊಂಡಿದೆ.

ಕಾಶ್ಮೀರದ ಹೆಚ್ಚಿನ ಭಾಗಗಳಲ್ಲಿ 'ಮಾರ್ತಾಂಡ' ಎನ್ನುವುದನ್ನು 'ಮಟ್ಟನ್' ಎಂದೂ ಕರೆಯುತ್ತಾರೆ. 15ನೇ ಶತಮಾನದಲ್ಲಿ ಕಾಶ್ಮೀರದ ಮುಸ್ಲಿಂ ಆಡಳಿತಗಾರ ಸಿಕಂದರ್ ಶಾ ಮಿರಿ ಆದೇಶದ ಮೇರೆಗೆ ಈ ಭವ್ಯ, ಗಟ್ಟಿಮುಟ್ಟಾದ ದೇವಾಲಯದ ಸಂಕೀರ್ಣವನ್ನು ನೆಲಸಮಮಾಡಲು ನಿರಂತರ ಒಂದು ವರ್ಷದ ತನಕ ಸರ್ವ ಪ್ರಯತ್ನಪಟ್ಟರಾದರೂ, ಅದ್ಭುತ ನಿರ್ಮಾಣ ಕಾರಣದಿಂದ ಸಂಪೂರ್ಣ ನಾಶಮಾಡಲು ವಿಫಲರಾದರು. ಹೀಗಿದ್ದರೂ ಕಾಲಾನಂತರದಲ್ಲಿ ದೇಗುಲದ ಅವಶೇಷಗಳು ಮಾತ್ರ ಉಳಿದುಕೊಂಡವು.

ಅವಶೇಷದಲ್ಲಿಯೂ ತನ್ನ ಚೆಲುವನ್ನು, ಗಾಂಭೀರ್ಯವನ್ನು ಉಳಿಸಿಕೊಂಡಿರುವ ಈ ದೇಗುಲ ತನ್ನ ವಾಸ್ತುಶೈಲಿಯಿಂದ ಪ್ರವಾಸಿಗರು ಇಲ್ಲಿಗೆ ಹುಡುಕಿಬರುವಂತೆ ಮಾಡಿದೆ. ಮಧ್ಯಕಾಲೀನ ಭಾರತೀಯ ವಾಸ್ತುಶಿಲ್ಪದ ತೇಜಸ್ಸನ್ನು ನಿರೂಪಿಸುವ ವಿಶಿಷ್ಟ ಕುರುಹಾಗಿ ಕಾಣುತ್ತದೆ.

ಪ್ರತಿಕ್ರಿಯಿಸಿ: feedback@sudha.co.in